ದಿನಾಂಕಃ**05.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು 1ನೇ ಎದುರುದಾರರ ಪರ ಶ್ರೀ ಸಿ ಎಂ ವಕೀಲರಿಂದಃ-

ನಾನು ಹೆಚ್ಚಿನ ಪರಿಹಾರವನ್ನು ಕೋರಿ ಸಂಬಂದಪಟ್ಟ ಪ್ರಾಧಿಕಾರದ ಮುಂದೆ ಸೂಕ್ತ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**2** ಫಾರಂ ಹೌಸ್ ಗಳು, **2** ಬೋರ್ ವೆಲ್ ಗಳು ಹಾಗೂ ಮರವಳಿಗಳು ರೈಲ್ವೆ ಯೋಜನೆಗೆ ಭೂಸ್ವಾಧೀನವಾದ ಬಗ್ಗೆ ಯಾವುದೇ ದಾಖಲಾತಿಗಳು ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಅರ್ಜಿ ಸ್ವತ್ತಿನ ಪಕ್ಕ ಒಂದು ಮಣ್ಣು ರಸ್ತೆ ಹಾದು ಹೋಗುತ್ತದೆ . ಅಲ್ಲಿ ಯಾವುದೇ ರಾಜ್ಯ ಅಥವಾ ರಾಷ್ಟ್ರೀಯ ಹೆದ್ದಾರಿ ಇರುವುದಿಲ್ಲ. **2** ಫಾರಂ ಹೌಸ್ ಗಳು, **2** ಬೋರ್ ವೆಲ್ ಗಳು ನಾನು ಪ್ರಮಾಣ ಪತ್ರದಲ್ಲಿ ಹೇಳಿರುವಷ್ಟು ಬೆಲೆ ಬಾಳುವುದಿಲ್ಲ ಅಂದರೆ ಸರಿಯಲ್ಲ.

ಸಂಬಂದಪಟ್ಟ ಎಲ್ಲಾ ಇಲಾಖೆಗಳು ಸ್ಥಳತನಿಖೆ ಮಾಡಿ ಅತಿ ಹೆಚ್ಚು ಪರಿಹಾರ ಹಾಗೂ ವೈಜ್ಞಾನಿಕ ಬೆಲೆ ನಿಗದಿಪಡಿಸಿ ಕೊಟ್ಟಿದ್ದಾರೆ ಅಂದರೆ

ಸರಿಯಲ್ಲ. ಅತಿ ಹೆಚ್ಚು ಪರಿಹಾರವನ್ನು ನೀಡಿದ್ದರು ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲು **2** ನೇ ಎದುರುದಾರರ ಪರ ಶ್ರೀ ಡಿಜಿಪಿ ವಕೀಲರಿಂದಃ-</u>

ಸರ್ವೇ ನಂ.**122** ರ ಒಟ್ಟು ವಿಸ್ತೀರ್ಣ **1.2.00.00** ರಲ್ಲಿ **0.16** ಗುಂಟೆ ಮಾತ್ರ ರೈಲ್ವೆ ಯೋಜನೆಗೆ ಹೋಗಿರುತ್ತದೆ ಅಂದರೆ ಸರಿ. **2** ಫಾರಂ ಹೌಸ್ ಗಳು ಇದ್ದ ಬಗ್ಗೆ ಸಂಬಂದಪಟ್ಟ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಭೂ ಸ್ವಾಧೀನಕ್ಕೆ ಒಳಪಟ್ಟ ಜಮೀನಿನಲ್ಲಿ ಒಂದು ಫಾರಂ ಹೌಸ್ , **2** ಬೋರ್ ವೆಲ್ ಗಳು ಹೋಗಿರುತ್ತದೆ. ಅರ್ಜಿ ಸ್ವತ್ತು ತುಮಕೂರಿನಿಂದ **15** ಕಿಮೀ ಅಂತರದಲ್ಲಿ ಇರುತ್ತದೆ ಅಂದರೆ ಸರಿ. ಫಾರಂ ಹೌಸ್ ನಿರ್ಮಾಣ ಮಾಡಲು **15** ಲಕ್ಷ ಖರ್ಚು ಆದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಸಲ್ಲಿಸಿಲ್ಲ. ಬೋರ್ ವೆಲ್ ಗೆ **10** ಲಕ್ಷ ಖರ್ಚು ಆದ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಸಲ್ಲಿಸಿಲ್ಲ.

ಮರವಳಿಗಳಿಗೆ ವಯಸ್ಸಿನ ಬಗ್ಗೆ ಸಂಬಂದಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಬಂದಾಗ ನೀಡಿದ ಮಾಹಿತಿ ಆಧಾರದ ಮೇಲೆ ಪ್ರಮಾಣ ಪತ್ರದಲ್ಲಿ ನಮೂದಿಸಿಲಾಗಿದೆ. ಆ ಕುರಿತು ಯಾವುದೇ

ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಅರ್ಜಿ ಸ್ವತ್ತು ಹೆಚ್ಚಿನ ಬೆಲೆ ಬಾಳುತ್ತದೆ ಎಂದು ತೋರಿಸಲು ಯಾವುದೇ ಕ್ರಯಪತ್ರಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಅಂದರೆ ಸರಿ. ಪರಿಹಾರದ ಹಣವನ್ನು ಪಡೆಯುವಸಮಯದಲ್ಲಿ ನಾನು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ. ಆದ್ದರಿಂದ ತಾವು ಹೆಚ್ಚಿನ ಪರಿಹಾರದ ಹಣವನ್ನು ಪಡೆಯಲು ಬರುವುದಿಲ್ಲ ಅಂದರೆ ಸರಿಯಲ್ಲ.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು